**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**MVC No.67/2024**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ವಿನೋದಾ ಬಂಕಾಪುರ | ಪಿಡಬ್ಲ್ಯೂ | 01 |
| ತಂದೆ ಹೆಸರು | : | ನಿಂಗಪ್ಪ | | |
| ವಯಸ್ಸು | : | 44 ವರ್ಷ | | |
| ಉದ್ಯೋಗ | : | ಏನೂ ಇಲ್ಲ | | |
| ವಾಸ ಸ್ಥಳ | : | ದೇವಿಹೊಸೂರು | | |

**ದಿನಾಂಕ: 29.12.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ.ಆರ್ ಕೆ ಕೆ ವಕೀಲರಿಂದ

ನಾನು ಈ ಅರ್ಜಿಯಲ್ಲಿ 1ನೇ ಅರ್ಜಿದಾರಳಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ. ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 1 | ಮುಳಬಾಗಿಲ ಟೌನ ಪಿಎಸ್ ಕ್ರೈಂ ನಂ. 142/2023 ರಲ್ಲಿನ FIR ನ ದೃಡಿಕೃತ ನಕಲು |
| ನಿ ಪಿ 2 | ದೂರು ಹಾಗೂ ಮರುಹೇಳಿಕೆಯ ದೃಡಿಕೃತ ನಕಲು |
| ನಿ ಪಿ 3 | ಅಂತಿಮ ವರದಿ |
| ನಿ ಪಿ 4 | ಸ್ಥಳ ಪಂಚನಾಮೆ |
| ನಿ ಪಿ 5 | ಪಿ ಎಂ ವರದಿ |
| ನಿ ಪಿ 6 & 7 | ಎರಡು ಎಂ ವಿ ವರದಿಗಳು |
| ನಿ ಪಿ 8 | MLC intimation |

| | |
|---|---|
| ನಿ ಪಿ 9 | ಘಟನಾ ಸ್ಥಳದ ಕಚ್ಚಾನಕ್ಷೆ |
| ನಿ ಪಿ 10 | ವಾಹನ ನಂ. ಪಿ ವಾಯ್ 05 ಎನ್ 8577 ರ ಆರ್ ಸಿ ಯ ದೃಡಿಕೃತ ನಕಲು |
| ನಿ ಪಿ 11 | ವಿಮಾ ಪಾಲಿಸಿಯ ದೃಡಿಕೃತ ನಕಲು |
| ನಿ ಪಿ 12 | ದಾಮೋದರನ್ ವಿ. ರವರ ಡಿ ಎಲ್ ನ ದೃಡಿಕೃತ ನಕಲು |
| ನಿಪಿ-13 | ವಾಹನ ನಂ. ಎಪಿ 29 ಟಿ 6578 ಗೆ ಸಂಬಂಧಿಸಿದ ಆರ್ ಸಿಯ ದೃಡಿಕೃತ ನಕಲು |
| ನಿ ಪಿ 14 | ವಾಹನ ನಂ. ಎಪಿ 29 ಟಿ 6578 ಗೆ ಸಂಬಂಧಿಸಿದ ಫರ್ಮಿಟನ ದೃಡಿಕೃತ ನಕಲು |
| ನಿ ಪಿ 15 | ವಾಹನ ನಂ. ಎಪಿ 29 ಟಿ 6578 ಗೆ ಸಂಬಂಧಿಸಿದ ಫಿಟನೆಸ್ ಸರ್ಟಿಫಿಕೆಟನ ದೃಡಿಕೃತ ನಕಲು |
| ನಿ ಪಿ 16 ರಿಂದ 18 | ಅರ್ಜಿದಾರರ ಆಧಾರಕಾರ್ಡನ ನೋಟರಿ ಪ್ರತಿಗಳನ್ನು ಮೂಲ ಕಾರ್ಡಗಳನ್ನು ನೋಡಿ ಗುರುತಿಸಲಾಯಿತು |
| ನಿ ಪಿ 19 | ಶಾಲಾ ದಾಖಲಾತಿ |

<u>ಪಾಟೀ ಸವಾಲುಃ ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದಃ</u>

ಸದರಿ ಅಪಘಾತ ನಡೆದಾಗ ನಾನು ಮನೆಯಲ್ಲಿ ಇದ್ದ ಕಾರಣದಿಂದ ಸದರಿ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ಸಂಬಂಧಿಕರು ಲಾರಿಯ ತಪ್ಪಿನಿಂದ ಆಗಿದೆ ಎಂದು ಹೇಳಿದ್ದರು ಎನ್ನುತ್ತಾರೆ. ಸದರಿ ಅಪಘಾತವಾದ ಸಮಯದಲ್ಲಿ ನನ್ನ ಮಗ ಚಾಲಕ ಕೆಲಸ ಮಾಡುತ್ತಿದ್ದನು. ಸದರಿ ನನ್ನ ಮಗ ನನ್ನ ಸಂಬಂಧಿಕರಾದ ವೈದ್ಯರ ಬಳಿ ಅವರ ವಾಹನ ಚಾಲನೆ ಮಾಡಲು ಹೋಗುತ್ತಿದ್ದನು. ಸದರಿ ವೈದ್ಯರ ಹೆಸರು ನನಗೆ ನೆನಪಿಲ್ಲ. ಸದರಿ ನನ್ನ ಮಗ ಆತ ತೀರಿಕೊಳ್ಳುವ 2-3 ವರ್ಷದ ಹಿಂದಿನಿಂದ ಚಾಲಕ ವೃತ್ತಿ ಮಾಡುತ್ತಿದ್ದ. ಸದರಿ 2-3 ವರ್ಷಗಳಿಂದ ಸದರಿ ವೈದ್ಯರ ಬಳಿ ಕೆಲಸಕ್ಕೆ ಹೋಗುತ್ತಿದ್ದ. ಸದರಿ ಅಪಘಾತವಾದಾಗ ಆತ ತಿರುಪತಿಗೆ ಹಾವೇರಿಯಿಂದ ಹೊರಟಿದ್ದ.

2. ಆತ ಸದರಿ ದಿನ ಚಾಲನೆ ಮಾಡುತ್ತಿದ್ದ ವಾಹನ ಜೀಪ್ ಆಗಿತ್ತು. ಅಪಘಾತವಾದ ಸ್ಥಳಕ್ಕೆ ನಾನು ಹೋಗಿಲ್ಲ, ನನ್ನ ಸಂಬಂಧಿಕರು ಅಪಘಾತವಾದ ಸ್ಥಳಕ್ಕೆ ಹೋಗಿ ನೋಡಿ ಹೇಳಿರುತ್ತಾರೆ. ಸದರಿ ಜೀಪನಲ್ಲಿ ಇಬ್ಬರು ಹೊರಟಿದ್ದರು. ಜೀಪನಲ್ಲಿ ನನ್ನ ಮಗನನ್ನು ಸೇರಿಸಿ ಇಬ್ಬರು ಇದ್ದರು, ನನ್ನ ಮಗನ ಜೊತೆ ಸದರಿ ಜೀಪನ ಮಾಲೀಕ ಇದ್ದರು, ಅವರ ಹೆಸರು ನನಗೆ ಗೊತ್ತಿಲ್ಲ.

3. ಸದರಿ ಘಟನೆ ಮುಳಬಾಗಿಲ ಸಮೀಪದ ಬೈಪಾಸ್ ಬಳಿ ಆಗಿದೆ ಎಂದರೆ ಸರಿ. ಸದರಿ ಅಪಘಾತ ಸ್ಥಳದ ಬಳಿ ತ್ರಿಕೋನಾಕಾರದ ಸರ್ಕಲ್ ಇದೆ ಎಂದರೆ ಸರಿ. ನನ್ನ ಮಗ ಸದರಿ ಬೈಪಾಸನಿಂದ ಮುಖ್ಯರಸ್ತೆಗೆ ಸೇರುವಾಗ ತನ್ನ ವಾಹನವನ್ನು ಜೋರಾಗಿ ಚಾಲನೆ ಮಾಡಿಕೊಂಡು ನಿಯಂತ್ರಿಸಲಾಗದೇ ಡಿವೈಡರಗೆ ಡಿಕ್ಕಿಪಡಿಸಿ ಅಪಘಾತಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಕ್ಯಾಂಟರ ವಾಹನದ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ನನ್ನ ಸಂಬಂಧಿಕರು ನೀಡಿರುತ್ತಾರೆ. ದೂರನ್ನು ದಾಖಲಿಸಿದ ನನ್ನ ಸಂಬಂಧಿಕರ ಹೆಸರು ಚಂದ್ರು ಎಂದು ಇರುತ್ತದೆ. ನನ್ನ ಮಗನಿಗೆ ತಿಂಗಳಿಗೆ 30-40 ಸಾವಿರ ರೂಪಾಯಿ ಸಂಬಳ ಇತ್ತು. ನನ್ನ ಮಗನಿಗೆ ತಿಂಗಳಿಗೆ 30-40 ಸಾವಿರ ರೂಪಾಯಿ ಸಂಬಳ ಇತ್ತು ಅಂತಾ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಎರಡು ಜನ ಮಕ್ಕಳು. ಓರ್ವ ಮಗ ಮತ್ತು ಓರ್ವ ಮಗಳು. ನನ್ನ ಗಂಡ ಸಹ ಚಾಲಕರಾಗಿದ್ದರು. ಅವರಿಗೂ ಸಹ 10 ವರ್ಷದ ಹಿಂದೆ ಅಪಘಾತವಾಗಿದ್ದರಿಂದ ಅವರು ಸಹ ಈಗ ಮನೆಯಲ್ಲಿದ್ದಾರೆ. ನಮ್ಮ ಕುಟುಂಬದಲ್ಲಿ ನಾವು 4 ಜನ ಮಾತ್ರ ಅಂತಾ ತೋರಿಸಲು ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ.

5. ನನ್ನ ಮಗ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದ. ಸದರಿ ಅಪಘಾತ ಕ್ಯಾಂಟರ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಆದ್ದರಿಂದ 2 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ಮಗ ಘಟನೆಯಾದ ಮರುದಿನ ತೀರಿಕೊಂಡಿರುತ್ತಾನೆ.

1 ನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರು ಇದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>: ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್